## ಬುತ್ತಿ ಚಿಗುರು

### ಓಟದ ಪಂದ್ಯಕ್ಕೆ ಅಲ್ಲ

ಬ್ಯಾಂಕಿನ ಕ್ಯಾಷಿಯರ್ ಹುದ್ದೆಗೆ ಅಭ್ಯರ್ಥಿಗಳ ಆಯ್ಕೆ ನಡೆದಾಗ ಮ್ಯಾರಾಥಾನ್ ಓಟಗಾರ ತಿಮ್ಮನೂ ಭಾಗವಹಿಸಿದ್ದ. ತಿಮ್ಮನಿಗೆ ಎಲ್ಲ ಯೋಗ್ಯತೆಗಳಿದ್ದರೂ ಆರಿಸದೆ ಕಾಲು ಕುಂಟುತ್ತಿದ್ದ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿದರು.

ತಿಮ್ಮ ಕೋಪದಿಂದ ಪ್ರತಿಭಟಿಸಿದ. 'ನಾನೊಬ್ಬ ಅಂತರರಾಷ್ಟ್ರೀಯ ಓಟಗಾರ. ಅಮೆರಿಕದಲ್ಲೂ ಓಟದ ಪಂದ್ಯದಲ್ಲಿ ಗೆದ್ದಿದ್ದೇನೆ. ನನ್ನನ್ನು ಆಯ್ಕೆ ಮಾಡಬೇಕಿತ್ತಲ್ಲವೆ?' ಎಂದು ಕೇಳಿದ.

'ನಾವಿಲ್ಲಿ ಕ್ಯಾಷಿಯರ್ ಹುದ್ದೆಗೆ ಆಯ್ಕೆ ಮಾಡುತ್ತಿರುವುದು. ಹಣ ಎತ್ತಿಕೊಂಡು ಅಮೆರಿಕದವರೆಗೂ ಓಡಬಲ್ಲ ಓಟಗಾರನನ್ನು ಅಲ್ಲ' ಎಂದರು ಆಯ್ಕೆ ಸಮಿತಿಯ ಮುಖ್ಯಸ್ಥರು.



**ಪ. ರಾಮಕೃಷ್ಣ ಶಾಸ್ತ್ರಿ**

### ಲಗ್ನ ಪತ್ರಿಕೆ ಓದುವೆ!

ಸರ್ಕಾರಿ ಶಾಲೆಯೊಂದರ, ಮಾಸ್ತರರೊಬ್ಬರು ಮಕ್ಕಳಿಗೆ ಪಾಠ ಮಾಡುತ್ತಾ, ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ಮೈಗೂಡಿಸಿಕೊಂಡರೆ ಆದರಿಂದಾಗುವ ಪ್ರಯೋಜನಗಳು, ವಿದ್ಯಾರ್ಥಿಗಳ ಭವ್ಯ ಭವಿಷ್ಯ ರೂಪಿಸುವಲ್ಲಿ ಪತ್ರಿಕೆಗಳ ಪಾತ್ರಗಳು ಇತ್ಯಾದಿ ಬಗ್ಗೆ ವಿವರಿಸಿದರು.



ಬಳಿಕ ವಿದ್ಯಾರ್ಥಿಗಳನ್ನು ಕುರಿತು, 'ನಿಮ್ಮಲ್ಲಿ ಯಾರಿಗಾದರೂ ಪತ್ರಿಕೆ ಓದುವ ಹವ್ಯಾಸವಿದೆಯೇ?' ಎಂದು ಪ್ರಶ್ನಿಸಿದರು.

ತರಗತಿಯಲ್ಲಿಯೇ, ದಡ್ಡ ಎಂದು ಕುಖ್ಯಾತಿ ಹೊಂದಿದ್ದ ಹಿಂದಿನ ಬೆಂಚಿನಲ್ಲಿ ಕೂತಿದ್ದ ಸುಬ್ಬ ಕೈ ಎತ್ತಿ 'ನಾನು ಓದ್ತೀನಿ ಸರ್!' ಎಂದ.

ತರಗತಿಯಲ್ಲಿ ಪತ್ರಿಕೆ ಓದುವ ಒಬ್ಬನಾದರೂ ವಿದ್ಯಾರ್ಥಿ ಇದ್ದಾನಲ್ಲ ಎಂದು ಮಾಸ್ತರರಿಗೆ ಖುಷಿಯಾಯಿತು!.

'ಯಾವ ಪತ್ರಿಕೆ ಓದುತ್ತೀಯಾ' ಎಂಬ ಮಾಸ್ತರ ಪ್ರಶ್ನೆಗೆ 'ಲಗ್ನ ಪತ್ರಿಕೆ ಸಾ' ಎಂದು ಉತ್ತರಿಸಿದಾಗ ಇಡೀ ತರಗತಿ ನಗೆಗಡಲಿನಲ್ಲಿ ಮುಳುಗಿತು.

**ಚಂದ್ರಕುಮಾರ್ ಡಿ.**